# ಅದ್ವಿಕ

LBA ಆಧಾರಿತ

## ಸಂಕಲನಾತ್ಮಕ ಮೌಲ್ಯಮಾಪನ-1

### ನೀಲನಕ್ಷೆ -ಪ್ರಶ್ನೆ ಪತ್ರಿಕೆ -ಮಾದರಿ ಉತ್ತರಗಳು

**8 ನೇತರಗತಿ**

**2025**

**ಸಮಾಜ ವಿಜ್ಞಾನ**




ಟಿಪ್ಪುಸುಲ್ತಾನ ಮಸಲವಾಡದ
ಸಮಾಜ ವಿಜ್ಞಾನ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ನಾರಾಯಣಪುರಗೇಟ್
ಸಿರಾ ತಾಲ್ಲೂಕು ತುಮಕೂರು ಉತ್ತರ ಜಿಲ್ಲೆ
ಮಧುಗಿರಿ

# ಸಂಕಲನಾತ್ಮಕ ಮೌಲ್ಯಮಾಪನ–1

**8ನೇ ತರಗತಿ** **ಸಮಾಜ ವಿಜ್ಞಾನ**

**2025–26ನೇ ಸಾಲಿನ ನೀಲನಕ್ಷೆ ಮತ್ತು ಪ್ರಶ್ನೆಪತ್ರಿಕೆ**

## ಸಾಮಾರ್ಥ್ಯವಾರು ಅಂಕ ಹಂಚಿಕೆ

| ಕ್ರಸಂ | ಸಾಮಾರ್ಥ್ಯ | ಅಂಕಗಳು | ಶೇಕಡ |
|---|---|---|---|
| 1 | ಜ್ಞಾನ | 07 | 17% |
| 2 | ತಿಳುವಳಿಕೆ | 20 | 50% |
| 3 | ವಿಮರ್ಶಾತ್ಮಕಚಿಂತನೆ/ಅನ್ವಯ | 11 | 28% |
| 4 | ಕೌಶಲ್ಯ | 02 | 05% |
| | ಒಟ್ಟು | 40 | 100% |

## ವಿಭಾಗವಾರು ಅಂಕ ಹಂಚಿಕೆ

| ಕ್ರಸಂ | ವಿಭಾಗ | ಬ.ಪ್ರ | ಕಿ ಉ ಪ್ರ | ಸ ಉ ಪ್ರ | ದೀ ಉ ಪ್ರ 1 | ದೀ ಉ ಪ್ರ 2 | ನಕ್ಷೆ | ಪ್ರಶ್ನೆಗಳು | ಅಂಕಗಳು |
|---|---|---|---|---|---|---|---|---|---|
| 1 | ಇತಿಹಾಸ | 01 | 02 | 01 | 01(*1) | 01(*1) | | 06(*2) | 12 |
| 2 | ರಾಜ್ಯಶಾಸ್ತ್ರ | | – | 01(*) | – | 01 | | 02(*1) | 06 |
| 3 | ಸಮಾಜಶಾಸ್ತ್ರ | – | | 01(*) | 01 | | | 02(*1) | 05 |
| 4 | ಭೂಗೋಳಶಾಸ್ತ್ರ | 01 | 02 | 01 | 01(*1) | – | 01 | 6(*1) | 10 |
| 5 | ಅರ್ಥಶಾಸ್ತ್ರ | 01 | – | 01 | – | | | 02 | 03 |
| 6 | ವ್ಯವಹಾರಅಧ್ಯಯನ | 01 | – | – | 01(*1) | | | 02(*1) | 04 |
| | ಒಟ್ಟು | 04 | 04 | 05 *2 | 04 *03 | 02 *01 | 01 | 20 *06 | 40 |

## ಸಂಕಲನಾತ್ಮಕ ಮೌಲ್ಯಮಾಪನ-1

**8ನೇ ತರಗತಿ** **ಸಮಾಜ ವಿಜ್ಞಾನ**

**2025-26ನೇ ಸಾಲಿನ ನೀಲನಕ್ಷೆ ಮತ್ತು ಪ್ರಶ್ನೆಪತ್ರಿಕೆ**

### ಪ್ರಶ್ನಾನುಸಾರ ಅಂಕ ಹಂಚಿಕೆ

| ಕ್ರಸಂ | ಪ್ರಶ್ನೆಯವಿಧ | ಪ್ರಶ್ನೆಗಳ ಸಂಖ್ಯೆ | ಅಂಕಗಳು |
|---|---|---|---|
| 1 | ಬಹು ಆಯ್ಕೆ ಪ್ರಶ್ನೆಗಳು | 04 | 04 |
| 2 | ಕಿರುಉತ್ತರದ ಪ್ರಶ್ನೆಗಳು | 04 | 04 |
| 3 | ಸಂಕ್ಷಿಪ್ತಉತ್ತರದ ಪ್ರಶ್ನೆಗಳು | 05 | 10 |
| 4 | ದೀರ್ಘಉತ್ತರದ ಪ್ರಶ್ನೆಗಳು-1 | 04 | 12 |
| 5 | ದೀರ್ಘಉತ್ತರದ ಪ್ರಶ್ನೆಗಳು-1 | 02 | 08 |
| 6 | ನಕ್ಷೆ | 01 | 02 |
| | ಒಟ್ಟು | 20 | 40 |

### ಕ್ಲಿಷ್ಟಾನುಸಾರ ಅಂಕ ಹಂಚಿಕೆ

| ಕ್ರಸಂ | ಕಠಿಣತೆಯ ಮಟ್ಟ | ಅಂಕ | ಶೇಕಡ |
|---|---|---|---|
| 1 | ಸುಲಭ | 12 | 30% |
| 2 | ಸಾಮಾನ್ಯ | 20 | 50% |
| 3 | ಕಠಿಣ | 08 | 20% |
| | ಒಟ್ಟು | 40 | 100% |

8ನೇ ತರಗತಿ   ಘಟಕವಾರು ಅಂಕ ಹಂಚಿಕೆ   ಸಮಾಜ ವಿಜ್ಞಾನ

| ಕ್ರಸಂ | ಘಟಕಗಳ ಹೆಸರು | ಜ್ಞಾನ | | | | | ತಿಳುವಳಿಕೆ | | | | | ವಿಮರ್ಶಾತ್ಮಕ ಚಿಂತನೆ | | | | | ಕೌಶಲ್ಯ | | | | | ಪ್ರಶ್ನೆ | ಅಂಕ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಬಪ್ರ | 1 | 2 | 3 | 4 | ಬಪ್ರ | 1 | 2 | 3 | 4 | ಬಪ್ರ | 1 | 2 | 3 | 4 | ಬಪ್ರ | 1 | 2 | 3 | 4 | | |
| 1 | ಆಧಾರಗಳು | 1(1) | | | | | | | | | | | | | | | | | | | | 1 | 1 |
| 2 | ಭರತವರ್ಷ:ಭಾರತದಭೌಗೋಳಿಕಲಕ್ಷಣಗಳು | | | | | | | 1(1) | | | | | | | | | | | | | | 1 | 1 |
| 3 | ಪ್ರಾಚೀನ ಭಾರತದ ನಾಗರಿಕತೆ | | | | | | | | | | 1(4) | | | | | | | | | | | 2 | 6 |
| 4 | ಜಗತ್ತಿನ ಪ್ರಾಚೀನ ನಾಗರಿಕತೆಗಳು | | | | | | | | 1(2) | | | | | | | | | | | | | | |
| 5 | ಸನಾತನ ಧರ್ಮ | | | | | | | | | 1(3) | | | 1(1) | | | | | | | | | 2 | 4 |
| 6 | ಜೈನ ಮತ್ತು ಬೌದ್ಧ ಧರ್ಮಗಳು | | | | | | | | | | | | | | | | | | | | | | |
| 7 | ರಾಜ್ಯಶಾಸ್ತ್ರದ ಅರ್ಥ ಮತ್ತು ಪ್ರಾಮುಖ್ಯತೆ | | | | | | | | 1(2) | | | | | | | | | | | | | 2 | 6 |
| 8 | ಪೌರ ಮತ್ತು ಪೌರತ್ವ | | | | | | | | | | | | | | | 1(4) | | | | | | | |
| 9 | ಮಾನವ ಮತ್ತು ಸಮಾಜ | | | 1(2) | | | | | | | | | | | 1(3) | | | | | | | 2 | 5 |
| 10 | ಮಾನವ ಮತ್ತು ಸಂಸ್ಕೃತಿ | | | | | | | | | | | | | | | | | | | | | | |
| 11 | ಭೂಮಿ ನಮ್ಮ ಜೀವಂತ ಗ್ರಹ | | | | | | | 1(1) | | 1(3) | | | | | | | | | | | | 3 | 5 |
| 12 | ಶಿಲಾಗೋಳ | | | | | | | | | | | 1(1) | | | | | | | | | | | |
| 13 | ವಾಯುಗೋಳ | | 1(1) | | | | | | 1(2) | | | | | | | | | | 1*(2) | | | 3 | 5 |
| 14 | ಅರ್ಥಶಾಸ್ತ್ರದ ಅರ್ಥ & ಪ್ರಾಮುಖ್ಯತೆ | | | | | | 1(1) | | | | | | | 1(2) | | | | | | | | 2 | 3 |
| 15 | ವ್ಯವಹಾರ-ಅರ್ಥ & ಪ್ರಾಮುಖ್ಯತೆ | | | | 1(3) | | 1(1) | | | | | | | | | | | | | | | 2 | 4 |
| | ಒಟ್ಟು | 4(7) | | | | | 10(20) | | | | | 5(11) | | | | | 1(2) | | | | | 20 | 40 |

*ಆವರಣದ ಹೊರಗಿನ ಸಂಖ್ಯೆಗಳು ಪ್ರಶ್ನೆಗಳನ್ನು ಸೂಚಿಸುತ್ತವೆ.

* ಆವರಣದ ಒಳಗಿನ ಸಂಖ್ಯೆಗಳು ಅಂಕಗಳನ್ನು ಸೂಚಿಸುತ್ತವೆ

ಸಮಾಜ ವಿಜ್ಞಾನ ಸಂಕಲನಾತ್ಮಕ ಮೌಲ್ಯಮಾಪನ–01 ಅಂಕಗಳು : 40

8ನೇ ತರಗತಿ ಸಮಯ: 1:30 ನಿಮಿಷ

---

I ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದ್ದು ಸರಿಯಾದ ಉತ್ತರವನ್ನು ಕ್ರಮಾಕ್ಷರದೊಂದಿಗೆಬರೆಯಿರಿ

1 ಕನ್ನಡ ಭಾಷೆಯ ಮೊದಲ ಶಾಸನ 4X1=4

A) ಐಹೊಳೆ ಶಾಸನ B) ಹಲ್ಮಿಡಿ ಶಾಸನ C) ಅಲಹಾಬಾದ್‌ಸ್ತಂಭ ಶಾಸನ D) ತಾಳಗುಂದ ಸಿಂಹಕಟಾಂಜನ ಶಾಸನ

2 ರಾಸಾಯನಿಕ ಕ್ರಿಯೆಯಿಂದ ಉಂಟಾಗುವ ಕಣ ಶಿಲೆ

A) ಗ್ರಾಫೈಟ್ B) ಗ್ರಾನೈಟ್ C) ಜಿಪ್ಸಂ D) ಸುಣ್ಣದ ಕಲ್ಲು

3 ಸರಕು ಸೇವೆಯಲ್ಲಿರುವ ಮಾನವರ ಬಯಕೆಯನ್ನು ತೃಪ್ತಿಪಡಿಸುವ ಗುಣ

A) ಆಸೆ B) ತುಷ್ಟೀಗುಣ C) ತೃಪ್ತಿ D) ಪ್ರತಿಫಲ

4 ದೊಡ್ಡ ಪ್ರಮಾಣದಲ್ಲಿ ಸರಕುಗಳನ್ನು ಕೊಂಡು ಸಣ್ಣ ಪ್ರಮಾಣದಲ್ಲಿ ಗ್ರಾಹಕರಿಗೆ ಮಾರುವವರು.

A) ಸಗಟು ವ್ಯಾಪಾರಿ B) ಚಿಲ್ಲರೆ ವ್ಯಾಪಾರಿ C) ಉತ್ಪಾದಕ ವ್ಯಾಪಾರಿ D) ವಿತರಕ ವ್ಯಾಪಾರಿ

II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ 4X1=4

5 ನೀವೂ ಶ್ರವಣಬೆಳಗೋಳಕ್ಕೆ ಪ್ರವಾಸ ಹೋದಾಗ ಅಲ್ಲಿ ಬಿಳಿ ಉಡುಪು ಧರಿಸಿದ ಜೈನ ಮುನಿಗಳನ್ನು ನೋಡಿ ಅವರನ್ನು ಜೈನ ಧರ್ಮದ ಯಾವ ಪಂಗಡಕ್ಕೆ ಸೇರಿದವರು ಎಂದು ನಿರ್ಧರಿಸುವಿರಿ.?

6 ರೇವುಪಟ್ಟಣಗಳ ಅಭಿವೃದ್ಧಿ ಯಾವ ಪ್ರಬಲ ರಾಜ್ಯಗಳ ಉದಯಕ್ಕೆ ಕಾರಣವಾಗಿತ್ತು.?

7 ದಕ್ಷಿಣಾರ್ಧಗೋಳವನ್ನು ಜಲ ಪ್ರಧಾನಗೋಳವೆಂದು ಕರೆಯಲಾಗಿದೆ. ಏಕೆ ?

8 ವಾಯುವಿನ ವೇಗ ಅಳೆಯುವ ಮಾಪಕ ಯಾವುದು.?

III ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ. 5X2=10

9 ಉಷ್ಣಾಂಶದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ತಿಳಿಸಿ

10 ಅರ್ಥಶಾಸ್ತ್ರದ ಅಧ್ಯಯನವು ಅತಿ ಅವಶ್ಯಕವಾಗಿದೆ– ಸಮರ್ಥಿಸಿ

11 ಲೋಕರೂಢಿಗಳೆಂದರೇನು.? ಅವುಗಳನ್ನು ಹೆಸರಿಸಿ ಅಥವಾ ಸಾಮಾಜೀಕರಣ ಎಂದರೇನು. ?

12 ಪೌರತ್ವ ಕಳೆದುಕೊಳ್ಳುವ ವಿಧಾನಗಳನ್ನು ತಿಳಿಸಿ ಅಥವಾ ರಾಜ್ಯಶಾಸ್ತ್ರ ಅಧ್ಯಯನದ ನಾಲ್ಕು ಪ್ರಯೋಜನ ತಿಳಿಸಿ

13 ಹಮ್ಮುರಬಿಯ ಕಾನೂನಿನ ವೈಶಿಷ್ಟ್ಯತೆಗಳೇನು.?

IV ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯದಲ್ಲಿ ಉತ್ತರಿಸಿರಿ. 4X3=12

14 ಸನಾತನ ಧರ್ಮದ ವಿಶೇಷತೆಗಳನ್ನು ತಿಳಿಸಿ. ಅಥವಾ ಗೌತಮ ಬುದ್ಧನು ಬೋಧಿಸಿದ ಅಷ್ಟಾಂಗ ಮಾರ್ಗಗಳನ್ನು ತಿಳಿಸಿ.

15 ಮಾನವರಿಗೆ ಸಾಮಾಜಿಕ ಪರಿಸರ ಅತ್ಯಗತ್ಯವಾಗಿದೆ ಎಂಬುದನ್ನು ವಿವರಿಸಿ.

16 ಅಕ್ಷಾಂಶ ಮತ್ತು ರೇಖಾಂಶಗಳು ಒಂದು ಪ್ರದೇಶದ ವಾಯುಗುಣವನ್ನು ಹೇಗೆ ನಿರ್ಧರಿಸುತ್ತವೆ.? ಅಥವಾ ಚಿಲುಮೆಗಳ ವಿಧಗಳನ್ನು ಪಟ್ಟಿ ಮಾಡಿರಿ.

17 ಸಗಟು ವ್ಯಾಪಾರದ ಅನುಕೂಲಗಳಾವುವು.? ಅಥವಾ ಚಿಲ್ಲರೆ ವ್ಯಾಪಾರಿಗಳ ಸೇವೆಗಳನ್ನು ತಿಳಿಸಿ.

V ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯದಲ್ಲಿ ಉತ್ತರಿಸಿರಿ. 2X4=8

18 ಪೌರನು ಮತ್ತು ವಿದೇಶಿಯನಿಗಿರುವ ವ್ಯತ್ಯಾಸಗಳನ್ನು ಪಟ್ಟಿ ಮಾಡಿರಿ

19 ಚೀನಾದ ಮಹಾಗೋಡೆಯ ಐತಿಹಾಸಿಕ ಮಹತ್ವ ತಿಳಿಸಿ. ಅಥವಾ ಸಿಂಧೂ ನಾಗರಿಕತೆಯ ನಗರ ಯೋಜನೆಯನ್ನು ತಿಳಿಸಿ

VI 20 ಅಕ್ಷಾಂಶಗಳ ಆಧಾರದ ಮೇಲೆ ವಿವಿಧ ಉಷ್ಣಾಂಶ ವಲಯಗಳ ಚಿತ್ರ ಬರೆಯಿರಿ 2

# ಮಾದರಿ ಉತ್ತರಗಳು


| ಪ್ರಶ್ನೆ ಸಂಖ್ಯೆ | ಮಾದರಿ ಉತ್ತರಗಳು | | ಅಂಕ ಹಂಚಿಕೆ |
|---|---|---|---|
| 1 | A) ಐಹೊಳೆ ಶಾಸನ | | 1 |
| 2 | C) ಜಿಪ್ಸಂ | | 1 |
| 3 | B) ತುಷ್ಟೀಗುಣ | | 1 |
| 4 | B) ಚಿಲ್ಲರೆ ವ್ಯಾಪಾರಿ | | 1 |
| 5 | ಶ್ವೇತಾಂಬರ ಪಂಗಡ ಎಂದು ನಿರ್ಧರಿಸುತ್ತೇವೆ. | | 1 |
| 6 | ಪಾಂಡ್ಯ , ಚೇರ ಚೋಳ ರಾಜ್ಯಗಳ ಉಗಮಕ್ಕೆ ಕಾರಣವಾಯಿತಿ | | 1 |
| 7 | ಇಲ್ಲಿ 81% ಜಲರಾಶಿಯಿದ್ದು 19% ಭೂಭಾಗವಿರುವುದರಿಂದ | | 1 |
| 8 | ಪವನವೇಗ ಮಾಪಕದಿಂದ ವಾಯುವಿನ ವೇಗ ಅಳೆಯುವರು. | | 1 |
| 9 | ಉಷ್ಣಾಂಶದ ಮೇಲೆ ಪ್ರಭಾವ ಬೀರುವ ಅಂಶಗಳು : –<br>• ಅಕ್ಷಾಂಶ<br>• ಒಂದು ಸ್ಥಳದ ಎತ್ತರ<br>• ಸಮುದ್ರದಿಂದ ಇರುವ ದೂರ<br>• ಮಾರುತಗಳು<br>• ಸಾಗರ ಪ್ರವಾಹಗಳು<br>• ಮೋಡಗಳು<br>• ಮಳೆ ( ಯಾವುದಾದರು 4 ಅಂಶಗಳು ) | | 2<br>½<br>½<br>½<br>½ |
| 10 | ಅರ್ಥಶಾಸ್ತ್ರ ಅಧ್ಯಯನದ ಮಹತ್ವ : –<br>• ಬಡತನ, ನಿರುದ್ಯೋಗ,ಆರ್ಥಿಕ ಅಸಮಾನತೆ ಮುಂತಾದ ಸಮಸ್ಯೆ ತಿಳಿಯಲು<br>• ಮಿತವಾದ ಸಂಪನ್ಮೂಲಗಳಿಂದ ಅಮಿತವಾದ ಬಯಕೆಗಳನ್ನು ಬಯಕೆ ತೃಪ್ತಿಪಡಿಸಲು<br>• ಸರಕು ಸೇವೆಗಳನ್ನು ಉತ್ಪಾದಿಸಲು ಮಾರ್ಗದರ್ಶನಕ್ಕಾಗಿ<br>• ಬೆಲೆಗಳ ಏರಿಳಿತದ ಕಾರಣ ಪರಿಣಾಮ ಗುರುತಿಸಿ ಸ್ಥಿರತೆ ಕಾಪಾಡಲು<br>• ನೈಸರ್ಗಿಕ ಸಂಪನ್ಮೂಲಗಳನ್ನು ಮಿತವಾಗಿ ಬಳಸುವುದನ್ನು ತಿಳಿಯಲು<br>( ಯಾವುದಾದರು 4 ಅಂಶಗಳು ) | | 2<br>½<br>½<br>½<br>½ |
| 11 | ಲೋಕ ರೂಢಿಗಳು ಮತ್ತು ವಿವಿಧ ಲೋಕರೂಢಿ:–<br>ನಾವು ದಿನನಿತ್ಯದ ಜೀವನದಲ್ಲಿ ಮತ್ತೆ ಮತ್ತೆ ತೊಡಗುವ ಚಟುವಟಿಕೆಗಳೇ ಲೋಕರೂಢಿಗಳು<br>• ಊಟ ಮಾಡುವುದು<br>• ನಿದ್ರಿಸುವುದು<br>• ಶುಭಾಷಯ ಹೇಳುವುದು | ಸಾಮಾಜೀಕರಣವೆಂದರೆ : –<br>ಸಮಾಜದ ಮೂಲಕ ಭಾಷೆ ಓದು ಆಟ ಯೋಚನೆ ವಿಧಾನ ದೈಹಿಕ ಭಾಷೆ ಮೊದಲಾದವುಗಳನ್ನು ಕಲಿತುಕೊಳ್ಳುವ ಪ್ರಕ್ರಿಯೆಯನ್ನು ಸಾಮಾಜೀಕರಣ ಎಂದು ಕರೆಯುವರು. | 2<br>½<br>½<br>½<br>½ |

| | | | |
|---|---|---|---|
| 12 | ಪೌರತ್ವ ಕಳೆದುಕೊಳ್ಳುವ ವಿಧಾನಗಳು :–<br>• ಪರಿತ್ಯಾಗ<br>• ಅಂತ್ಯಗೊಳಿಸುವಿಕೆ<br>• ನಿರಾಕರಣೆ | ರಾಜ್ಯಶಾಸ್ತ್ರ ಅಧ್ಯಯನದ ನಾಲ್ಕು ಪ್ರಯೋಜನಗಳು:<br>• ರಾಜ್ಯದ ಉಗಮ ಬೆಳವಣಿಗೆ ತಿಳಿಯಲು<br>• ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ರಚನೆ ಮತ್ತು ಕಾರ್ಯಗಳ ಮಾಹಿತಿ ತಿಳಿಯಲು<br>• ಸಂವಿಧಾನ & ಕಾನೂನಿನ ಜ್ಞಾನಕ್ಕಾಗಿ<br>• ನಾಯಕತ್ವದ ಗುಣ ಬೆಳೆಸಲು ಸಹಾಯಕ<br>• ಅಂತರಾಷ್ಟ್ರೀಯ ಸಂಬಂಧದ ಜ್ಞಾನಕ್ಕಾಗಿ | 2<br>½<br>½<br>½<br>½ |
| 13 | ಹಮ್ಮುರಬಿಯ ಕಾನೂನಿನ ವೈಶಿಷ್ಟ್ಯತೆಗಳು : –<br>• ಹಮ್ಮುರಬಿಯ ಸಂಹಿತೆ ಕಣ್ಣಿಗೆ ಬದಲು ಕಣ್ಣು<br>• ಹಲ್ಲಿಗೆ ಬದಲು ಹಲ್ಲು<br>• ಯಾರಿಂದ ಯಾವ ಹಾನಿಯಾಗುವುದೋ ಅದೇ ಹಾನಿ ಅವರಿಗೂ ಮಾಡುವುದು<br>• ಕಣ್ಣು ಕಿತ್ತವರ ಕಣ್ಣನ್ನೇ ಕೀಳುವುದು<br>• ಬ್ಯಾಬಿಲೋನ್ ಸಮಾಜ ರಕ್ಷಣೆಗಾಗಿ ರೂಪಿಸಿದ ನಿಯಮವಾಗಿತ್ತು<br>• ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗಾಗಿ ರೂಪಿಸಲಾಗಿತ್ತು. | | 2<br>½<br>½<br>½<br>½ |
| 14 | ಸನಾತನ ಧರ್ಮದ ವಿಶೇಷತೆಗಳು :–<br>• ಎಲ್ಲಾರು ಸುಖಿಗಳಾಗಿರಲಿ<br>• ರೋಗ ಚಿಂತನೆಯಿಂದ ಮುಕ್ತರಾಗಿರಲಿ<br>• ಎಲ್ಲಾರು ಶುಭವನ್ನೇ ಕಾಣಲಿ<br>• ಯಾರು ದುಃಖಿತರಾಗದೇ ಇರಲಿ<br>• ಸರ್ವ ಜೀವ ರಾಶಿಗಳಿಗೆ ಸದಾ ಸುಖ ಶಾಂತಿ ನೆಮ್ಮದಿಗಳು ಇರಲಿ | ಗೌತಮ ಬುದ್ದನು ಬೋಧಿಸಿದ ಅಷ್ಟಾಂಗ ಮಾರ್ಗ:<br>• ಒಳ್ಳೆಯ ನಡತೆ, ಒಳ್ಳೆಯ ಮಾತು<br>• ಒಳ್ಳೆಯ ನೋಟ , ಒಳ್ಳೆಯ ಬದುಕು<br>• ಒಳ್ಳೆಯ ಪ್ರಯತ್ನ , ಒಳ್ಳೆಯ ನೆನಪು<br>• ಒಳ್ಳೆಯ ನಿರ್ಧಾರ , ಒಳ್ಳೆಯ ಚಿಂತನೆ | 3<br>½<br>½<br>½<br>½<br>½<br>½ |
| 15 | ಮಾನವರಿಗೆ ಸಾಮಾಜಿಕ ಪರಿಸರ ಅತ್ಯಗತ್ಯವಾಗಿದೆ : –<br>• 1920ರಲ್ಲಿ ಮಿಡ್ನಾಪುರದಲ್ಲಿ ಕಮಲ ಎಂಬ ಹುಡುಗಿಯು 9 ವರ್ಷಗಳನ್ನು ಕಾಡಿನಲ್ಲಿ ಪ್ರಾಣಿಗಳೊಂದಿಗೆ ಕಳೆದಿದ್ದಳು<br>• ಅಲ್ಲಿ ಹಸಿಮಾಂಸ ತಿನ್ನುತ್ತಾ ಪಶುಗಳಂತೆ ನಾಲ್ಕು ಕಾಲಿನಲ್ಲಿ ನಡೆಯುತ್ತಿದ್ದಳು<br>• ಅನಂತರ ಮನುಷ್ಯನ ಸಹವಾಸದಿಂದ ಮಾತನಾಡುವುದು ಇತರೆ ಮಕ್ಕಳಂತೆ ವರ್ತಿಸುವುದನ್ನು ಕಲಿತಳು<br>• ಈ ಊದಹರಣೆಯಿಂದ ಮಾನವನು ಸಮಾಜದಲ್ಲಿ ಬದುಕಬೇಕು ಇಲ್ಲವಾದರೆ ಪ್ರಾಣಿಯಂತೆ ಆಗುತ್ತಾನೆ<br>• ಹಾಗಾಗಿ ಮಾನವನಿಗೆ ಸಾಮಾಜಿಕ ಪರಿಸರ ಅಗತ್ಯವಾಗಿದೆ. | | 3<br>½<br>½<br>½<br>½<br>½<br>½ |

| | | | |
|---|---|---|---|
| 16 | ಅಕ್ಷಾಂಶ ಮತ್ತು ರೇಖಾಂಶಗಳು ಒಂದು ಪ್ರದೇಶದ ವಾಯುಗುಣವನ್ನು ನಿರ್ಧರಿಸುತ್ತವೆ.: –<br>• ಸಮಭಾಜಕ ವೃತ್ತದಿಂದ 23°.30' ಉತ್ತರ ಮತ್ತು ದಕ್ಷಿಣ ಅಕ್ಷಾಂಶ ಅಧಿಕ ಶಾಖ ಪಡೆಯುತ್ತವೆ<br>• ಈ ಭಾಗವೇ ಉಷ್ಣ ವಲಯವಾಗಿದೆ<br>• ಅದೇ ರೀತಿ 23°.30' ಡಿಗ್ರಿಯಿಂದ 66°.30' ವರೆಗೆ ಶಾಖವು ಸಮ ಉಷ್ಣ ಪಡೆಯುವ ಪ್ರದೇಶಗಳಾಗಿವೆ<br>• ಉತ್ತರ ಮತ್ತು ದಕ್ಷಿಣ ಗೋಳಾರ್ಧದ ಮೇಲೆ ಎರಡರಲ್ಲೂ ಈ ವಲಯವನ್ನು ಸಮಶೀತ ಉಷ್ಣವಲಯವೆಂದು ಪರಿಗಣಿಸಿದೆ<br>• ಇದರ ಆಧಾರದ ಮೇಲೆ ಒಂದು ಪ್ರದೇಶದ ವಾಯುಗುಣವನ್ನು ಇವುಗಳು ನಿರ್ಧರಿಸುತ್ತವೆ. | ಚಿಲುಮೆಗಳ ವಿಧಗಳು :–<br>• ನಿರಂತರ ಚಿಲುಮೆಗಳು<br>• ನಿಯತಕಾಲಿಕ ಚಿಲುಮೆಗಳು<br>• ಬಿಸಿ ನೀರಿನ ಚಿಲುಮೆಗಳು<br>• ಬಿಸಿ ನೀರಿನ ಬುಗ್ಗೆಗಳು<br>• ಆರ್ಟಿಸಿಯನ್ ಬಾವಿಗಳು | 3<br>½<br>½<br>½<br>½<br>½<br>½ |
| 17 | ಸಗಟು ವ್ಯಾಪಾರದ ಅನುಕೂಲಗಳು : –<br>• ಇವರು ಚಿಲ್ಲರೆ ವ್ಯಾಪಾರಿಗಳಿಗೆ ಸಹಾಯಮಾಡುತ್ತಾರೆ<br>• ಅವರ ಪರವಾಗಿ ಜಾಹಿರಾತು ಮಾಡುತ್ತಾರೆ<br>• ಮಾರುಕಟ್ಟೆ ವಿವರ ಕೊಡುವರು<br>• ಹೆಚ್ಚು ಲಾಭ ಪ್ರಮಾಣ ಇರುವುದಿಲ್ಲ<br>• ಉತ್ಪಾದಕರಿಗೆ ಗ್ರಾಹಕರ ಇಷ್ಟ ತಿಳಿಸುವರು<br>• ಉತ್ಪಾದಕರ ಪರವಾಗಿಯೂ ಜಾಹಿರಾತು ಮಾಡುತ್ತಾರೆ<br>• ವಸ್ತುಗಳನ್ನು ಶೇಖರಿಸಿಡಲು ಸಹಾಯ | ಚಿಲ್ಲರೆ ವ್ಯಾಪಾರಿಗಳ ಸೇವೆಗಳು : –<br>• ವಸ್ತು ವಿತರಣೆಯ ಕೊನೆಯ ಕೊಂಡಿ<br>• ವಸ್ತುವನ್ನು ಸಗಟು ವ್ಯಾಪಾರಿಯಿಂದ ಕೊಂಡು ಗ್ರಾಹಕರಿಗೆ ತಲುಪಿಸುತ್ತಾರೆ<br>• ವ್ಯಾಪಾರದ ನಷ್ಟವನ್ನು ತಾವೇ ಭರಿಸುತ್ತಾರೆ<br>• ಗ್ರಾಹಕರಿಗೆ ಸಾಲ ಸೌಲಭ್ಯ ನೀಡುತ್ತಾರೆ<br>• ಹೊಸ ವಸ್ತುಗಳ ಮಾಹಿತಿ ತಿಳಿಸುವರು<br>• ನಿರ್ದಿಷ್ಟ ವಸ್ತು ದೊರೆಯದೇ ಇದ್ದಾಗ ಪರ್ಯಾಯ ವಸ್ತು ತಿಳಿಸುವರು<br>• ಈ ವ್ಯಾಪಾರ ಬೇರೆ ಬೇರೆ ರೀತಿ ನಡೆಯುತ್ತದೆ | 3<br>½<br>½<br>½<br>½<br>½<br>½ |
| 18 | ಪೌರ | ವಿದೇಶಿಯ | 4 |
| | • ದೇಶದ ಶಾಶ್ವತ ನಿವಾಸಿಯಾಗಿರುತ್ತಾನೆ<br>• ರಾಜಕೀಯ ಹಕ್ಕು ಲಭ್ಯವಿದೆ<br>• ತನ್ನ ರಾಜ್ಯಕ್ಕೆ ನಿಷ್ಠೆ ತೋರಿಸುತ್ತಾನೆ<br>• ದೇಶ ಬಿಟ್ಟು ಹೋಗುವಂತೆ ಆಜ್ಞೆ ವಿಧಿಸುವಂತಿಲ್ಲ | • ತಾತ್ಕಲಿಕ ನಿವಾಸಿಯಾಗಿರುತ್ತಾನೆ<br>• ಈ ಹಕ್ಕು ಲಭ್ಯವಿಲ್ಲ<br>• ತನ್ನ ದೇಶಕ್ಕೆ ನಿಷ್ಠೆ ತೋರಿಸುತ್ತಾನೆ<br>• ಕಾನೂನು ಬಾಹಿರ ಚಟುವಟಿಕೆಯಿಂದ ದೇಶವನ್ನು ಬಿಟ್ಟು ಹೋಗುವಂತೆ ಆಧೇಶ ನೀಡಬಹುದು | ½<br>½<br>½<br>½<br>½<br>½<br>½<br>½ |

| | | |
|---|---|---|
| 19 | **ಚೀನಾದ ಮಹಾಗೋಡೆಯ ಐತಿಹಾಸಿಕ ಮಹತ್ವ : –**<br>• ಚೀನಾ ಹಲವು ಸಣ್ಣ ಪಟ್ಟ ಸಂಸ್ಥಾನಗಳನ್ನು ಒಳಗೊಂಡಿತ್ತು<br>• ನಂತರ ಎಲ್ಲಾವನ್ನು ಒಗ್ಗೂಡಿಸಿ 7 ದೊಡ್ಡ ರಾಜ್ಯಗಳನ್ನು ನಿರ್ಮಿಸಿದರು<br>• ಹೀಗೆ ಸೃಷ್ಟಿಯಾದ ರಾಜ್ಯಗಳ ರಕ್ಷಣೆಗೆ ಗಡಿಯುದ್ದಕ್ಕೂ ಸ್ವತಂತ್ರವಾದ ಗೋಡೆಯ ನಿರ್ಮಾಣ<br>• ಉತ್ತರ ಭಾಗದಿಂದ ಆಕ್ರಮಣ ಮಾಡುತ್ತಿದ್ದ ದಾಳಿಯನ್ನು ತಡೆಯಲು ಗೋಡೆ ಒಂದುಗೂಡಿಸಿದರು<br>• ಮಹಾಗೋಡೆಯನ್ನು ಸಾ ಶ ಪೂ 7ನೇ ಶತಮಾನದಲ್ಲಿ ಕಟ್ಟಲು ಆರಂಭಿಸಲಾಯಿತು<br>• ಸಾ ಶ ಪೂ 16 ನೇ ಶತಮಾನದ ವರೆಗೆ ಕಟ್ಟಲಾಯಿತು<br>• ಗೋಡೆಯ ಉದ್ದ 5000 ಕಿಲೋಮೀಟರ್<br>• ಇದು ಜಗತ್ತಿನ ವಿಸ್ಮಯಗಳಲ್ಲಿ ಒಂದಾಗಿದೆ.<br><br>**ಸಿಂಧೂ ನಾಗರಿಕತೆಯ ನಗರ ಯೋಜನೆ : –**<br>• ತಗ್ಗಿನ ಪ್ರದೇಶ ಜನ ವಸತಿ ಪ್ರದೇಶವಾಗಿತ್ತು<br>• ಮನೆಗಳನ್ನು ಕ್ರಮ ಬದ್ಧವಾಗಿ ನಿರ್ಮಾಣ<br>• ರಸ್ತೆ ಮತ್ತು ಒಳಚರಂಡಿಗಳ ನಿರ್ಮಾಣ<br>• ಒಂದು ಮತ್ತು 2 ಅಂತಸ್ಥಿನ ಮನೆಗಳನ್ನು ಹೊಂದಿದ್ದರು<br>• ಮನೆ ಕಟ್ಟಲು ಸುಟ್ಟ ಇಟ್ಟಿಗೆ ಬಳಸುತ್ತಿದ್ದರು<br>• ಮನೆಯ ಯಾವ ಕಿಟಕಿಯು ರಸ್ತೆಗೆ ಮುಖ ಮಾಡಿರಲಿಲ್ಲ<br>• ಪ್ರತಿ ಮನೆಯಲ್ಲಿ ಬಾವಿ ಸ್ನಾನದ ಕೊಠಡಿಗಳಿದ್ದವು<br>• ಮನೆ ಬಳಕೆಯಾದ ನೀರು ಚರಂಡಿ ಸೇರುತ್ತಿತ್ತು ಶುಚಿಗೊಳಿಸಲು ಅಲ್ಲಲ್ಲಿ ರಂಧ್ರಗಳಿದ್ದವು | 4<br><br><br>½<br>½<br>½<br>½<br>½<br>½<br>½<br>½ |

**20**




ಉಷ್ಣಾಂಶ ವಲಯಗಳು

2

**ತರಗತಿ : 8** **ಸಂಕಲನಾತ್ಮಕ ಮೌಲ್ಯಮಾಪನ–1** **ಸಮಾಜ ವಿಜ್ಞಾನ**

**ಮೌಖಿಕ ಪರೀಕ್ಷೆಯ ಅಂಕ ನಮೂದು** **ಗರಿಷ್ಟ ಅಂಕಗಳು : 10**

| ಕ್ರಸಂ | ವಿದ್ಯಾರ್ಥಿಯಹೆಸರು | ಪ್ರಶ್ನೆ 1 | ಪ್ರಶ್ನೆ 2 | ಪ್ರಶ್ನೆ 3 | ಪ್ರಶ್ನೆ 4 | ಪ್ರಶ್ನೆ 5 | ಪ್ರಶ್ನೆ 6 | ಪ್ರಶ್ನೆ 7 | ಪ್ರಶ್ನೆ 8 | ಪ್ರಶ್ನೆ 9 | ಪ್ರಶ್ನೆ 10 | ಪಡೆದ ಅಂಕ | ಗ್ರೇಡ್ |
|---|---|---|---|---|---|---|---|---|---|---|---|---|---|
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |